ವಿಷಯ :- ಖಾದಿಬಟ್ಟೆ ರಿಬೇಟ್ ರದ್ದತಿಯಿಂದ ಉದ್ದಿಮೆಗಳಿಗೆ ಹಾನಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 824 (759)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಸಣ್ಣ ಪ್ರಮಾಣದ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರ ಖಾದಿ ಆಯೋಗದ ಮೂಲಕ ನೀಡುತ್ತಿದ್ದ ಖಾದಿ ಬಟ್ಟೆಯ ಮೇಲಿನ ರಿಬೇಟನ್ನು ನಿಲ್ಲಿಸಿರುವುದರಿಂದ ಖಾದಿ ಬಟ್ಟೆ ಏರ್ಪಾಗದೆ ಉಳಿದು ಖಾದಿ ಸಂಸ್ಥೆಯ ಉದ್ದಿಮೆಗಳು ನಷ್ಟ ಹೊಂದಿ, ಅವುಗಳು ಮುಚ್ಚುವಂತಹ ಪ್ರಸಂಗ ಉದ್ಭವಿಸಿ ರಾಜ್ಯದಲ್ಲಿ ಸಾವಿರಾರು ಜನರು ನಿರುದ್ಯೋಗಿಗಳಾಗುವ ಸಂಭವಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಹಾಗಿದ್ದಲ್ಲಿ, ರಿಬೇಟ್ ಮುಂದುವರಿಕೆಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಎ. ಮೊಯ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :-

ಅ) ಖಾದಿ ಆಯೋಗವು ತಮ್ಮ ಪರಿಪತ್ರ ಸಂಖ್ಯೆ ಡಿಕೆಸಿ ರಿಬೇಟ್ ಪಾಲಿಸಿ 96-97 ದಿನಾಂಕ 1-6-1996 ರಲ್ಲಿ ಖಾದಿ ಮಾರಾಟದ ಮೇಲೆ ರಿಬೇಟನ್ನು ಹಿಂತೆಗೆ ದುಕೊಂಡಿತ್ತು. ಅನೇಕ ಖಾದಿ ಸಂಸ್ಥೆಗಳ ಮನವಿ ಹಿನ್ನೆಲೆಯಲ್ಲಿ ಪರಿಪತ್ರ ಸಂಖ್ಯೆ ಡಿಕೆಸಿ ರಿಬೇಟ್ ಪಾಲಿಸಿ 96-97 ದಿನಾಂಕ 12 25-7-2996 ರಲ್ಲಿ ಖಾದಿ ರಿಬೇಟನ್ನು 1996-97 ರ ಸಾಲಿನಲ್ಲಿ ಮುಂದುವರಿಸಲು ಖಾದಿ ಆಯೋಗ ಪ್ರಕಟಣೆ ನೀಡಿರುತ್ತದೆ. ಆದ್ದರಿಂದ ಖಾದಿ ಸಂಸ್ಥೆಗಳಲ್ಲಿ ನಷ್ಟ ಮತ್ತು ನಿರುದ್ಯೋಗದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ :- ತಲಘಟ್ಟಪುರ ರೇಷ್ಮೆ ಸಂಶೋಧನ ಕೇಂದ್ರದಲ್ಲಿ ಅವ್ಯವಹಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 825 (1314)

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಲಘಟ್ಟಪುರ, ರೇಷ್ಮೆ ಸಂಶೋಧನಾ ಕೇಂದ್ರದಿಂದ ಇಲ್ಲಿಯವರೆಗೆ ಇಲಾಖೆಗೆ ಸಂಶೋಧನೆಯಿಂದ ಪ್ರಯೋಜನವಾಗಿದೆಯೇ.

ಆ) ಹಾಗಿದ್ದಲ್ಲಿ, ಯಾವ ಯಾವ ರೀತಿಯ ಸಂಶೋಧನೆಗಳನ್ನು ಮಾಡಿರುತ್ತಾರೆ.

ಇ) ಈ ಸಂಸ್ಥೆಯಲ್ಲಿ ನಡೆಯಿತೆನ್ನಲಾದ ಅವ್ಯವಹಾರದ ಬಗ್ಗೆ ತನಿಖೆಯಾಗುತ್ತಿದೆಯೇ?